RNU AIR DHARWAD

# OCTOBER 27, 2024
## AKASHAVANI - DHARWAD
## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಹಿಂಗಾರು ಅತಿವೃಷ್ಟಿ; ರಾಜ್ಯಾದ್ಯಂತ ಬೆಳೆ ಹಾನಿ ಸಮೀಕ್ಷೆ ಒಂದು ವಾರದೊಳಗೆ ಪೂರ್ಣ – ಸಿದ್ದರಾಮಯ್ಯ.
- ಶುದ್ಧ ಇಂಧನಗಳ ಬಳಕೆಯನ್ನು, ಕೇಂದ್ರ ಸರ್ಕಾರ ಉತ್ತೇಜಿಸುತ್ತಿದೆ – ಪ್ರಲ್ಹಾದ ಜೋಶಿ.
- ಸಾಗರ ಮಾಲಾ ಯೋಜನೆ; ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ, ಅನುಷ್ಠಾನ – ಜಯರಾಮ ರಾಯಪುರ.
- ಪ್ರಧಾನಮಂತ್ರಿಯವರ, 'ಮನ್ ಕಿ ಬಾತ್'; ಇಂದು ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

ಈಗ ವಾರ್ತೆಗಳ ವಿವರ

<><><>

ಹಿಂಗಾರು ಅತಿವೃಷ್ಟಿಯಿಂದ, ರಾಜ್ಯಾದ್ಯಂತ ಉಂಟಾಗಿರುವ ಬೆಳೆ ಹಾನಿ ಸಮೀಕ್ಷೆಯನ್ನು, ಮುಂದಿನ ಒಂದು ವಾರದೊಳಗೆ ಪೂರ್ಣಗೊಳಿಸಿ, ಸಮಗ್ರ ವರದಿ ಸಲ್ಲಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯ್ತಿ ಸಿ.ಇ.ಓ.ಗಳೊಂದಿಗೆ, ಅವರು ವಿಡಿಯೋ ಸಂವಾದ ನಡೆಸಿದರು. ಮಳೆಯಿಂದ ಪ್ರಾಣ ಹಾಗೂ ಮನೆ ಹಾನಿ ಪ್ರಕರಣಗಳಲ್ಲಿ, 48 ಗಂಟೆಗಳ ಒಳಗಾಗಿ ಪರಿಹಾರ ಒದಗಿಸುವಂತೆ, ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳ ಖಾತೆಯಲ್ಲಿ 551 ಕೋಟಿ ರೂಪಾಯಿ, ತಹಸೀಲ್ದಾರ್ ಖಾತೆಯಲ್ಲಿ, 116 ಕೋಟಿ ರೂಪಾಯಿ ಸೇರಿದಂತೆ, ಒಟ್ಟು 666 ಕೋಟಿ 96 ಲಕ್ಷ ರೂಪಾಯಿ ಹಣವನ್ನು, ಸಮರ್ಪಕವಾಗಿ ಬಳಸುವಂತೆ ಮುಖ್ಯಮಂತ್ರಿ ನಿರ್ದೇಶಿಸಿದರು.

<><><>

'ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ' ಜಾರಿಗೊಳಿಸಿ, ಕೇಂದ್ರ ಸರ್ಕಾರ, ಸಾಂಪ್ರದಾಯಿಕ ವಿದ್ಯುತ್ ಮೂಲಗಳ ಮೇಲಿನ ಅವಲಂಬನೆಯನ್ನು ಸೀಮಿತಗೊಳಿಸಿ, ಶುದ್ಧ ಇಂಧನಗಳನ್ನು ಉತ್ತೇಜಿಸುತ್ತಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಕರ್ನಾಟಕ ನವೀಕರಿಸಬಹುದಾದ ಇಂಧನ ವ್ಯವಸ್ಥೆ ತಯಾರಕರ ಸಂಘ ಬೆಂಗಳೂರಿನಲ್ಲಿ ಆಯೋಜಿಸಿದ್ದ, ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು, ಮಾತನಾಡಿದರು. 1 ಕೋಟಿ 30 ಲಕ್ಷ ಭಾರತೀಯರು, ಈಗಾಗಲೇ ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ, ಹೆಸರು ನೊಂದಾಯಿಸಿದ್ದಾರೆ. ವಾರ್ಷಿಕ ಪ್ರತಿ ಕುಟುಂಬ 25 ಸಾವಿರ ರೂಪಾಯಿ ಉಳಿಸುತ್ತದೆ ಎಂದರು.

<><><>

ಪ್ರತಿ ಜಿಲ್ಲೆಗೆ 20 ಮಂದಿ ಮಧ್ಯಸ್ಥಗಾರರನ್ನು ಆಯ್ಕೆ ಮಾಡಲಾಗಿದ್ದು, ನ್ಯಾಯದಾನ ಪ್ರಕ್ರಿಯೆಯಲ್ಲಿ ವೇಗವರ್ಧನೆ ಮತ್ತು ಸಕಾಲಿಕ ನಿರ್ಣಯಗಳ ಲಾಭ, ಕಕ್ಷಿದಾರರಿಗೆ ತಲುಪಲಿದೆ ಎಂದು, ಮೈಸೂರು ಜಿಲ್ಲೆ ಪ್ರಧಾನ ನ್ಯಾಯಾಧೀಶ ರವೀಂದ್ರ ಹೆಗಡೆ ಹೇಳಿದ್ದಾರೆ. ಮೈಸೂರು, ಚಾಮರಾಜನಗರ ಮತ್ತು ಕೊಡಗು–ಮಡಿಕೇರಿ ಜಿಲ್ಲೆಯ ಮಧ್ಯಸ್ಥಗಾರರಿಗೆ, ಮೈಸೂರಿನಲ್ಲಿ ಆಯೋಜಿತ, ಎರಡು ದಿನಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

<><><>

ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ, ಸಾವಿತ್ರಿ ಕುಜ್ಜಿ ಮಾತನಾಡಿ, ಕೌಟುಂಬಿಕ ನ್ಯಾಯಾಲಯಗಳ ವ್ಯಾಜ್ಯ ತೀರ್ಮಾನ ಹಾಗೂ ನೆಮ್ಮದಿಯ ಬದುಕಿಗೆ ಮಧ್ಯಸ್ಥಗಾರರ ನೆರವು ಮಹತ್ವದ್ದು ಎಂದರು.

<><><>

ದಕ್ಷಿಣಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು, ರಕ್ಷಣಾ ಸಚಿವಾಲಯದ ಸಲಹಾ ಸಮಿತಿ ಸದಸ್ಯರಾಗಿ, ನೇಮಕಗೊಂಡಿದ್ದಾರೆ. ಕೇಂದ್ರ ರಕ್ಷಣಾ ಖಾತೆ ಸಚಿವ ರಾಜನಾಥಸಿಂಗ್ ಹಾಗೂ ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ ಸೇಠ್ ಅವರ ಅಧ್ಯಕ್ಷತೆಯ ಸಲಹಾ ಸಮಿತಿಯಲ್ಲಿ, ಲೋಕಸಭೆಯ 14 ಹಾಗೂ ರಾಜ್ಯಸಭೆಯ 6 ಜನ ಸದಸ್ಯರ ಸಮಿತಿಯಲ್ಲಿ, ದಕ್ಷಿಣಕನ್ನಡ ಸಂಸದ ಬ್ರಿಜೇಶ್ ಚೌಟ ಕೂಡಾ ಒಬ್ಬರು. ಈ ಕುರಿತು ಪ್ರತಿಕ್ರಿಯಿಸಿರುವ ಕ್ಯಾಪ್ಟನ್ ಚೌಟ, ಒಬ್ಬ ಯೋಧನಾಗಿ, ಸಂಸತ್ತಿನ ಸದಸ್ಯನಾಗಿ ದೇಶದ ರಕ್ಷಣಾ ಕ್ಷೇತ್ರಕ್ಕೆ ಸೇವೆ ಸಲ್ಲಿಸಲು ಈ ಅವಕಾಶ ಸಿಕ್ಕಿರುವುದು ತಮ್ಮ ಸುಯೋಗ' ಎಂದಿದ್ದಾರೆ.

<><><>

'ನರಬಲಿ' ಕವನದ ಮೂಲಕ ದೇಶಪ್ರೇಮ ಮೆರೆದ, ವರಕವಿ ಡಾಕ್ಟರ್ ದ.ರಾ.ಬೇಂದ್ರೆ ಅವರಿಗೆ, ಬ್ರಿಟಿಷ್ ಸರ್ಕಾರ, ಧಾರವಾಡ ತಾಲೂಕಿನ ಮುಗದ ಗ್ರಾಮದಲ್ಲಿ, ಗೃಹ ಬಂಧನ ಶಿಕ್ಷೆ ವಿಧಿಸಿತ್ತು. ಕನ್ನಡಕ್ಕೆ 2ನೇ ಜ್ಞಾನಪೀಠ ತಂದುಕೊಟ್ಟ, ನಾಕುತಂತಿಯ 'ಅಂಬಿಕಾತನಯ ದತ್ತ', ಬೇಂದ್ರೆ ಅವರ 43ನೇ ಪುಣ್ಯಸ್ಮರಣೆ ನಿಮಿತ್ತ, ಮುಗದ ಗ್ರಾಮದ ಶ್ರೀ ದುರ್ಗಾದೇವಿ ದೇವಸ್ಥಾನದ ಆವಾರದಲ್ಲಿ, 'ಭೃಂಗದ ಬೆನ್ನೇರಿ' ಕಾವ್ಯವಾಚನ ಕಾರ್ಯಕ್ರಮ ಜರುಗಿತು. ಡಾಕ್ಟರ್ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ವಿಶ್ವಸ್ಥರಾದ ಡಾಕ್ಟರ್ ಶಾಮಸುಂದರ ಬಿದರಕುಂದಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಶಾಮಸುಂದರ ಬಿದರಕುಂದಿ ಧ್ವನಿ 50 ಸೆಕೆಂದುಗಳು

<><><>

ಈಗ ಪ್ರಕಟಣೆ..
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

(32 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಹಿಮಾಲಯದ ಪೂರ್ವದಿಂದ ಪಶ್ಚಿಮದ ವರೆಗೆ, ಪರ್ವತಾರೋಹಣ ಕೈಗೊಂಡು ಯಶಸ್ವಿಯಾದವರು, ಮೈಸೂರಿನ ಪತ್ರಕರ್ತೆ ಶ್ಯಾಮಲಾ ಪದ್ಮನಾಭನ್. ಅವರ ತಂಡದ ನೇತೃತ್ವ ವಹಿಸಿದವರು, ಹೆಸರಾಂತ ಪರ್ವತಾರೋಹಿ, ಪದ್ಮಭೂಷಣ ಬಚೇಂದ್ರಿ ಪಾಲ್. ಯೂ.ಪಿ.ಎಸ್.ಸಿ. ಪ್ರೊಬೇಷನರಿ ಅಧಿಕಾರಿಗಳಿಗೆ, ಪರ್ವತಾರೋಹಣದ ತರಬೇತಿ ನೀಡುವ, ಶ್ಯಾಮಲಾ ಅವರು, ಯುವ ಪೀಳಿಗೆಯಲ್ಲಿ ಸಾಹಸ ಪ್ರವೃತ್ತಿ ಪುನರುಜ್ಜೀವಿತಗೊಳಿಸುವ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಪರ್ವತಾರೋಹಿ ಶ್ಯಾಮಲಾ ಪದ್ಮನಾಭನ್ ಧ್ವನಿ 50 ಸೆಕೆಂದುಗಳು

<><><>

ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ, ಆಲಮಟ್ಟಿ ಮತ್ತು ಹೆರಕಲ್ ಗ್ರಾಮಗಳಲ್ಲಿ, ಕೇಂದ್ರ ಪುರಸ್ಕೃತ ಸಾಗರ ಮಾಲಾ ಯೋಜನೆ ಅಡಿ, ಪ್ರವಾಸೋದ್ಯಮ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ಒದಗಿಸುವ ರೂಪುರೇಷೆ ಸಿದ್ಧಗೊಂಡಿದೆ ಎಂದು, ಜಲ ಸಾರಿಗೆ ಮಂಡಳಿಯ ಸಿ.ಇ.ಓ. ಜಯರಾಮ ರಾಯಪುರ ತಿಳಿಸಿದ್ದಾರೆ. ಆಲಮಟ್ಟಿಯ ಶ್ರೀ ಲಾಲ್ ಬಹಾದ್ದೂರ ಶಾಸ್ತ್ರಿ ಅಣೆಕಟ್ಟೆಯ ಕೆಳಭಾಗದಲ್ಲಿ, 25 ಎಕರೆ ಜಮೀನಿನಲ್ಲಿ, ಮೀನು ಸಾಕಾಣಿಕೆ ಕೇಂದ್ರ ಸ್ಥಾಪನೆಯ ಪ್ರಸ್ತಾವಿತ ಸ್ಥಳಕ್ಕೆ ಭೇಟಿ ನೀಡಿ, ಅವರು ಪರಿಶೀಲಿಸಿದರು. ನದಿ ತೀರದಲ್ಲಿ ಜಲ ಮಾರ್ಗದ ಮೂಲಕ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಿದಲ್ಲಿ, ಹೆಚ್ಚಿನ ಸಂಖ್ಯೆಯ ಪ್ರವಾಸಿಗರನ್ನು ಸೆಳೆಯಬಹುದು. ಸುತ್ತ ಮುತ್ತಲಿನ ಜಿಲ್ಲೆಯ ಪ್ರವಾಸ ತಾಣಗಳು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಯಲ್ಲಿದ್ದು, ಸಂಪರ್ಕ ಕಲ್ಪಿಸಲು ಚಿಂತನೆ ನಡೆದಿದೆ ಎಂದರು.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಮುದಾಯ ವಿಜ್ಞಾನ ಮಹಾವಿದ್ಯಾಲಯ, ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿ, ಸಮಾಜಕ್ಕೆ ಅನುಪಮ ಕೊಡುಗೆ ನೀಡಿದೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್, ಶ್ಲಾಘಿಸಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಸಮುದಾಯ ವಿಜ್ಞಾನ ಮಹಾವಿದ್ಯಾಲಯದ, ಸುವರ್ಣ ಮಹೋತ್ಸವ ಸಮಾರಂಭವನ್ನು, ಆನ್‌ಲೈನ್‌ನಲ್ಲಿ ಉದ್ಘಾಟಿಸಿ, ಅವರು ಮಾತನಾಡಿದರು.

<><><>

ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್‌ನ, 115ನೇ ಸಂಚಿಕೆಯಾಗಿದೆ. ಹಿಂದಿ ಭಾಷೆಯ  ಪ್ರಸಾರದ ನಂತರ ಪ್ರಾದೇಶಿಕ ಭಾಷೆಗಳಲ್ಲೂ ಈ ಕಾರ್ಯಕ್ರಮ ಮೂಡಿಬರಲಿದೆ.

<><><>

ರಾಷ್ಟ್ರೋತ್ಥಾನ ಪರಿಷತ್, 37 ದಿನಗಳ ಪುಸ್ತಕ ಹಬ್ಬವನ್ನು ಆಯೋಜಿಸಿದೆ ಎಂದು, ರಾಷ್ಟ್ರೋತ್ಥಾನ ಕಾರ್ಯದರ್ಶಿ ದಿನೇಶ್ ಹೆಗ್ಡೆ ತಿಳಿಸಿದ್ದಾರೆ. ಯುವಜನರಲ್ಲಿ ರಾಷ್ಟ್ರೀಯ ಸಾಹಿತ್ಯದ ಸತ್ವವನ್ನು ಪಸರಿಸಲು, ಕನ್ನಡ ಪುಸ್ತಕ ಹಬ್ಬವನ್ನು ಯೋಜಿಸಲಾಗಿದೆ ಎಂದರು. ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ, ಕನ್ನಡ ರಾಜ್ಯೋತ್ಸವ ಪ್ರಯುಕ್ತ, ಡಿಸೆಂಬರ್ 1 ರ ವರೆಗೆ, 37 ದಿನಗಳ ಕಾಲ ಕನ್ನಡ ಪುಸ್ತಕ ಪ್ರದರ್ಶನ ಮತ್ತು ಮಾರಾಟದ, ಕನ್ನಡ ಪುಸ್ತಕ ಹಬ್ಬವನ್ನು ಬೆಂಗಳೂರಿನ ಕೆಂಪೇಗೌಡ ನಗರದ ಕೇಶವ ಶಿಲ್ಪ ಸಭಾಂಗಣದಲ್ಲಿ ಜರುಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಶ್ರೀ ಹಾಸನಾಂಬಾ ಹಾಗೂ ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ, 29ನೇ ತಾರೀಖಿನ ವರೆಗೆ, ಹಾಸನದ ಸಿಲ್ವರ್ ಜೂಬಿಲಿ ಆರ್ಚರ್ಡ್ ಪಾರ್ಕ್‌ನಲ್ಲಿ, ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ. ಸಂಸದ ಶ್ರೇಯಸ್ ಪಟೇಲ ಉದ್ಘಾಟಿಸಿದರು.

<><><>

ಧಾರವಾಡದ ಕೆ.ಇ. ಬೋರ್ಡಿನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ 25 ಜನ ವಿದ್ಯಾರ್ಥಿಗಳು ರಕ್ತದಾನ ಮಾಡಿದ್ದಾಗಿ, ಪ್ರಾಚಾರ್ಯ ಮೋಹನ ಸಿದ್ಧಾಂತಿ  ತಿಳಿಸಿದ್ದಾರೆ.

<><><>

ಭ್ರಷ್ಟಾಚಾರದ ವಿರುದ್ಧ ಜಾಗೃತಿಗೆ, ನಾಳೆಯಿಂದ ನವೆಂಬರ್ 3ರ ವರೆಗೆ, ಜಾಗೃತಿ ಅರಿವು ಸಪ್ತಾಹ ಆಚರಿಸಲು, ಕೇಂದ್ರ ವಿಚಕ್ಷಣಾ ಆಯೋಗ ಸೂಚಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಹಿಂಗಾರು ಅತಿವೃಷ್ಟಿ; ರಾಜ್ಯಾದ್ಯಂತ ಬೆಳೆ ಹಾನಿ ಸಮೀಕ್ಷೆ ಒಂದು ವಾರದೊಳಗೆ ಪೂರ್ಣ – ಸಿದ್ದರಾಮಯ್ಯ.
- ಶುದ್ಧ ಇಂಧನಗಳ ಬಳಕೆಯನ್ನು, ಕೇಂದ್ರ ಸರ್ಕಾರ ಉತ್ತೇಜಿಸುತ್ತಿದೆ – ಪ್ರಲ್ಹಾದ ಜೋಶಿ.

- ಸಾಗರ ಮಾಲಾ ಯೋಜನೆ; ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ, ಅನುಷ್ಠಾನ – ಜಯರಾಮ ರಾಯಪುರ.
- ಪ್ರಧಾನಮಂತ್ರಿಯವರ, 'ಮನ್ ಕಿ ಬಾತ್'; ಇಂದು ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ